



**ಕೇಶವ ಶರ್ಮ ಕೆ.**

ಕಲೆ: ವಿಶ್ವನಾಥ್ ಎ.ಎಸ್.

# ಕಲಿಯಬೇಕಪ್ಪ ಮನುಷ್ಯನಾದವ

ಅವನು ಖಿನ್ನಾತೀತ ಖಿನ್ನನಾಗಿ ಈ ವರ್ಷಕ್ಕೆ ಇಪ್ಪತ್ತೆಂಟು ವರ್ಷ ತುಂಬಿತು. ರಾತ್ರಿ ಮಲಗಿದರೆ ಎರಡೂವರೆಗೆ ಎಚ್ಚರವಾಗುತ್ತದೆ. ಮತ್ತೆ ನಿದ್ದೆ ಎನ್ನುವುದು ಹತ್ತಿರಕ್ಕೆ ಬರುವುದಿಲ್ಲ. ಅದರ ದ್ವೇಷವು ಮುಗಿದಿಲ್ಲ. ಅರೆತಲೆನೋವು ಬರುತ್ತದೆ-ಕರೆಯದೆ ಬರುವ ಅತಿಥಿಯಂತೆ. ತಿಂಗಳಿಗೆ ಮೂರು ನಾಲ್ಕು ಬಾರಿ ಆಗ ಏನೂ ಮಾಡುವುದಿಲ್ಲ. ಹಣೆಗೆ ಗಟ್ಟಿಯಾದ ಬಟ್ಟೆಯನ್ನು ಸುತ್ತಿಕೊಂಡು ಕೂರುತ್ತಾನೆ, ನೋವುನಿವಾರಕ ಮಾತ್ರೆ ನುಂಗುತ್ತಾನೆ, ಅದು ಸ್ವಲ್ಪ ಹೊತ್ತು ಕೆಲಸವನ್ನು ಮಾಡುತ್ತದೆ. ಆಮೇಲೆ ಯಥಾಪ್ರಕಾರ. ಕುಡಿಯುವುದನ್ನು ಬಿಟ್ಟು ಕೆಲವು ವರ್ಷಗಳಾದವು. ಕುಡಿಯಬೇಕೆಂದು ಅನಿಸುವುದಿಲ್ಲ.

ಡಾ.ರಾಹುಲ ಶರ್ಮನ ಮೊದಲ ಹೆಸರು ಮಹಾಬಲ ಶರ್ಮ. ಮೊದಲನೆಯ ಬಿ.ಎ ಇರುವಾಗಲೇ ತನ್ನ ಜನಿವಾರವನ್ನು ಕಿತ್ತು ಎಸೆದ. ಆಗ ಅವನು ಬಡತನವನ್ನು ತಿಂದಿದ್ದ. ಹಸಿವೆ ಎಂದರೆ ಏನು ಎಂದು ಗೊತ್ತಿತ್ತು. ಮಧ್ಯಾಹ್ನ ಉಪವಾಸ ಮಾಡಿಕೊಂಡು ಉಪವಾಸದ ಮಹತ್ವವನ್ನು ಅರ್ಥ ಮಾಡಿಕೊಂಡಿದ್ದ. ಒಂದು ದಿನ ಅವನು ತನ್ನ ಜನಿವಾರವನ್ನು ಕಿತ್ತು ಹಾಕಿದ. ತಾನು ಜಾತಿಯಿಂದ ಹೊರಗೆ ಬಂದೆ ಎಂದು ಭಾವಿಸಿಕೊಂಡ. ಯಾಕೋ ತುಂಬಾ ಖುಷಿಯೂ ಆಗಿತ್ತು. ತಾನು ಈಗ ಕ್ರಾಂತಿಕಾರಿ ಎಂದು ತನಗೆ ತಾನೇ ಭಾವಿಸಿಕೊಂಡ. ಜಾತಿಯಿಂದ ಹೊರಗೆ ಬರುವುದು ಎಂದರೆ ತನ್ನಮಟ್ಟಿಗೆ ಜನಿವಾರವನ್ನು ಕಿತ್ತು ಹಾಕುವುದು ಎನ್ನುವುದು ಅವನ ನಂಬಿಕೆಯೂ ಆಗಿತ್ತು. ವಿಶ್ವಾಮಿತ್ರ ಋಷಿಯು ತಪಸ್ಸಿನಿಂದ ಗಾಯತ್ರಿ ದೇವಿಯನ್ನು ಜನಿವಾರದ ಮೂರು ಗಂಟುಗಳಲ್ಲಿ ಕಟ್ಟಿ ಹಾಕಿದ ಗಾಯತ್ರಿಯ ಋಣ ತನಗೆ ಇನ್ನು ಇಲ್ಲ ಎಂದು ಭಾವಿಸಿದ. ಕಾಲೇಜಿನ ಇಂಗ್ಲಿಷಿನ ಉಪನ್ಯಾಸಕ ಲೋಹಿಯಾವಾದಿ, ಮೂರ್ತಿಯವರ ಅಪ್ಪಟ ಶಿಷ್ಯ ಶಾಂತಿನಾಥ ಕಾರಿಡಾರ್‌ನಲ್ಲಿ ಸಿಕ್ಕಿದವನು, 'ಮಹಾಬಲ ಇಲ್ಲಿ ಬಾ, ನಿನಗೆ ತುಂಬಾ ಪ್ರತಿಭೆಯಿದೆ, ಸಾಹಿತ್ಯದಲ್ಲಿ ಆಸಕ್ತಿಯೂ ಇದೆ, ನಿಮ್ಮಂಥ ಹುಡುಗರು ಬೆಳೆಯಬೇಕು. ಜಾತಿಯ ಸಿಕ್ಕುಗಳಿಂದ ಹೊರಗೆ ಬರಬೇಕು. ಇದೇನಯ್ಯಾ, ನಿನ್ನ ಪರಮ ಪವಿತ್ರವಾದ ಯಜ್ಞೋಪವೀತ ನಿನ್ನನ್ನು ಗಂಟು ಹಾಕಿದೆ. ಅದರಿಂದ ಹೊರಗೆ ಬಾ. ಆಗ ಲೋಕ ತಿಳಿಯುತ್ತದೆ' ಎಂದು ಹೇಳಿದ್ದು ಪ್ರಭಾವ ಬೀರಿದ್ದು ನಿಜ. ಆ ದಿವಸವೇ ಅವನು ಜನಿವಾರವನ್ನು ಕಿತ್ತು ಹಾಕಿದ್ದು. ಅದನ್ನು ಅವರಿಗೆ ಮರುದಿನ ಹೋಗಿ